'ಸರ್, ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ಇಲ್ಲ. ಗವರ್ನ್‌ಮೆಂಟ್‌ನೋರು ಬ್ಯಾನ್ ಮಾಡಿದ್ದಾರೆ. ಬೇಕಾದರೆ ಆ ಕಾಟನ್‌ಬ್ಯಾಗ್ ತಗೊಳಿ, 20 ರೂಪಾಯಿ. ಇನ್ನೂ ದೊಡ್ಡ ಬಟ್ಟೆಬ್ಯಾಗ್ ಬೇಕು ಅಂದ್ರೆ ಅದನ್ನು ತಗೊಳಿ, ಅದಕ್ಕೆ 40 ರೂಪಾಯಿ' ಎಂದು ಸಲಹೆ ನೀಡಿದ ದಿನಸಿ ಅಂಗಡಿಯ ಆ ಯುವತಿ, 'ಬಿಲ್ ಜೊತೆ ಈ ಬ್ಯಾಗ್ ಅಮೌಂಟೂ ಸೇರಿಸಿಬಿಟ್ಟಿದೀನಿ ಸರ್...' ಎಂದೂ ಹೇಳಿದರು.

ಮೂರು–ನಾಲ್ಕು ಕೆ.ಜಿ. ತೂಕದ ದಿನಸಿ ಪದಾರ್ಥಗಳನ್ನು ತೆಗೆದುಕೊಳ್ಳುವುದಕ್ಕೆ 20 ರೂಪಾಯಿ ಹೆಚ್ಚು ಖರ್ಚು ಮಾಡಬೇಕಾಯಿತಲ್ಲ ಎಂದು ಗೊಣಗುತ್ತ ಹಿಂದಿರುಗಿದೆ. ಅಂಗಡಿ ಎದುರಿದ್ದ 'ಪ್ಲಾಸ್ಟಿಕ್ ತೊಲಗಿಸಿ, ಪರಿಸರ ಉಳಿಸಿ' ಎನ್ನುವ ಬೋರ್ಡ್‌ನ್ನು ನನಗಾಗಿಯೇ ಹಾಕಿದ್ದಾರೇನೋ ಎನಿಸತೊಡಗಿತು.

2022ರ ಜುಲೈ 1ರಿಂದ ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳನ್ನು (ಎಸ್‌ಯುಪಿ – ಸಿಂಗಲ್ ಯೂಸ್ ಪ್ಲಾಸ್ಟಿಕ್) ನಿಷೇಧಿಸಿರುವುದು ನನ್ನ ಗಮನಕ್ಕೂ ಬಂದಿತ್ತು. ಆದರೆ, ಮನೆಯಿಂದಲೇ ಬ್ಯಾಗ್ ಒಯ್ಯದ ಕಾರಣ, 'ಹೆಚ್ಚುವರಿ' ಹಣ ತೆರಬೇಕಾಯಿತು. ಅಂದಹಾಗೆ, 'ಪ್ಲಾಸ್ಟಿಕ್ ನಿಷೇಧ' ಎಂಬ ಪದ ಕಿವಿಗೆ ಬೀಳುತ್ತಿರುವುದು ಇದು ಮೊದಲ ಸಲವೇನಲ್ಲವಲ್ಲ. ಪ್ರತಿ ಸಾರಿಯೂ ಒಂದಷ್ಟು ಸಮಯ ಪ್ಲಾಸ್ಟಿಕ್ ನಿಷೇಧ ಜಾರಿಯ ನಾಟಕ ಮುಂದುವರೆಯುತ್ತದೆ. ಕ್ರಮೇಣ, ನಿಷೇಧದ ಸಂಗತಿ ಮರೆತೇಹೋಗುತ್ತದೆ. ಆದರೆ, ಈ ಬಾರಿ ಏಕ ಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳ ನಿಷೇಧವನ್ನು ದೇಶದಾದ್ಯಂತ ಜಾರಿಗೊಳಿಸಲಾಗಿದೆ. ಈ ಮೂಲಕ ಪ್ಲಾಸ್ಟಿಕ್ ಬಳಕೆಗೆ ಕಾನೂನು ಕಡಿವಾಣ ಸಾಧ್ಯವಾಗಬಹುದೆನ್ನುವ ಆಶಾಭಾವ ಮೂಡಿದೆ.

'ಪರಿಸರ ಸಂರಕ್ಷಣಾ ಕಾಯ್ದೆಯ (ಇಪಿಎ) ಅಡಿಯಲ್ಲಿ, 100 ಮೈಕ್ರಾನ್‌ಗಿಂತ ಕಡಿಮೆ ದಪ್ಪದ 19 ಬಗೆಯ ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಯನ್ನು ಈಗ ನಿಷೇಧಿಸಲಾಗಿದೆ. ಒಂದು ಬಾರಿ ಉಪಯೋಗಿಸುವ ಎಲ್ಲ ಪ್ಲಾಸ್ಟಿಕ್ ಉತ್ಪನ್ನಗಳು ಕರ್ನಾಟಕದಲ್ಲಿ 2016ರಲ್ಲೇ ನಿಷೇಧಕ್ಕೆ ಒಳಗಾಗಿದ್ದವು. ಆದರೆ, ಇತರ ರಾಜ್ಯಗಳಲ್ಲಿ ಬಳಕೆಗೆ ಅವಕಾಶ ಕಲ್ಪಿಸಿದ್ದರಿಂದ ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳ ಕರ್ನಾಟಕದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲಿಲ್ಲ. ನಂತರ, 2021ರ ಆಗಸ್ಟ್ 12 ರಂದು ಕೂಡ ನಿಷೇಧದ ಅಧಿಸೂಚನೆ ಹೊರಡಿಸಲಾಗಿತ್ತು. ಪರಿಸರ ಸ್ನೇಹಿ ಆಯ್ಕೆಗಳಿಗೆ ಬದಲಾಗಲು ಉದ್ಯಮಗಳಿಗೆ ಸಾಕಷ್ಟು ಸಮಯವನ್ನೂ ನೀಡಲಾಗಿತ್ತು. ಅದು ಕೂಡ ಫಲಪ್ರದವಾಗಲಿಲ್ಲ. ಈಗ, ಕೇಂದ್ರ ಪರಿಸರ ಸಚಿವಾಲಯವು ದೇಶದಾದ್ಯಂತ, ಹಂತ–ಹಂತವಾಗಿ ಈ ಪ್ಲಾಸ್ಟಿಕ್‌ಗಳ ಬಳಕೆಯನ್ನು ನಿಷೇಧಿಸಿ, ಆದೇಶ ಹೊರಡಿಸಿದೆ.

## ಬೇರು ಮಟ್ಟದಲ್ಲಿಯೇ ಸಮಸ್ಯೆ

ಪದೇ ಪದೇ ಆದೇಶ ಹೊರಡಿಸಿದರೂ, ಪ್ಲಾಸ್ಟಿಕ್ ಉತ್ಪನ್ನಗಳ ಬಳಕೆಗೆ ದೇಶದಲ್ಲಿ ಇನ್ನೂ ಸಂಪೂರ್ಣವಾಗಿ ಕಡಿವಾಣ ಹಾಕಲು ಏಕೆ ಸಾಧ್ಯವಾಗಿಲ್ಲ ಎಂದು ನೋಡಿದರೆ, ಬೇರು ಮಟ್ಟದಲ್ಲಿಯೇ ಸಮಸ್ಯೆ ಇರುವುದು ಗೊತ್ತಾಗುತ್ತದೆ.

ಈ ಪ್ಲಾಸ್ಟಿಕ್ ಉತ್ಪನ್ನಗಳು ಎಲ್ಲಿ ತಯಾರಾಗುತ್ತವೆಯೋ ಆ ಘಟಕಗಳು ಅಥವಾ ಕಂಪನಿಗಳ ಮೇಲೆ ಕಡಿವಾಣ ಹಾಕಬೇಕು. ನಿಷೇಧದ ನಂತರವೂ ಈ ಘಟಕಗಳು ಪ್ಲಾಸ್ಟಿಕ್ ಉತ್ಪನ್ನಗಳ ಉತ್ಪಾದನೆ ಮುಂದುವರಿಸಲು ಕಾರಣ 'ಸಾಗಣೆ ವೆಚ್ಚ'.

ಪ್ಲಾಸ್ಟಿಕ್ ಉತ್ಪನ್ನಗಳನ್ನು ಉತ್ಪಾದಿಸುವ ಬಹುತೇಕ ಕಂಪನಿ ಅಥವಾ ಘಟಕಗಳು ತಮಗೆ ಬೇಕಾದ ಕಚ್ಚಾ ವಸ್ತುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತವೆ. ಸಾಗಣೆ ವೆಚ್ಚ ಉಳಿಸುವ ಉದ್ದೇಶದಿಂದ ಮತ್ತು ಈ ಕಚ್ಚಾ ಉತ್ಪನ್ನಗಳನ್ನು ಕೆಲವು ವರ್ಷಗಳವರೆಗೆ ಸಂಗ್ರಹಿಸಿಟ್ಟರೂ ಏನೂ ನಷ್ಟ ಅಥವಾ ತೊಂದರೆ ಉಂಟಾಗದಿರುವ ಕಾರಣ, ಒಂದು ಅಥವಾ ಎರಡು ವರ್ಷಗಳಿಗಾಗುವಷ್ಟು ಕಚ್ಚಾ ವಸ್ತುಗಳನ್ನು ಒಮ್ಮೆಗೇ ಆಮದು ಮಾಡಿಕೊಳ್ಳುತ್ತವೆ. ಈ ನಡುವೆ, ಇದ್ದಕ್ಕಿದ್ದಂತೆ ಸರ್ಕಾರ ನಿಷೇಧ ವಿಧಿಸಿದರೂ, ಈ ಕಂಪನಿಗಳು ಉತ್ಪಾದನೆಯನ್ನು ಕೈ ಬಿಡುವುದಿಲ್ಲ. ಈಗಲೂ, ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ಲಾಸ್ಟಿಕ್ ಕಚ್ಚಾ ಸಾಮಗ್ರಿಗಳ ಸಂಗ್ರಹವಿದೆ.

